ಪಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **02.04.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ: ಶ್ರೀ ಕೆ.ಎಂ.ಆರ್. ವಕೀಲರಿಂದ:

ನನ್ನ ಪತಿಯು ಡೈರಿಯಲ್ಲಿ ಕೆಲಸ ಮಾಡುತ್ತಿದ್ದು ಮತ್ತು ವ್ಯವಸಾಯ ವೃತ್ತಿಯನ್ನು ಮಾಡುತ್ತಿದ್ದು ಮೃತರಾಗಿರುತ್ತಾರೆ. ನನಗೆ ಪ್ರತಿವಾದಿಯ ಪರಿಚಯವಿದೆ. ಪ್ರತಿವಾದಿಯ ಮಕ್ಕಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿಯವರು ಏನು ವೃತ್ತಿಮಾಡುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿವೇಶನ ಸ್ವತ್ತಿಗೆ ಸಂಬಂಧಿಸಿದಂತೆ ಕರಾರು ಆಗಿರುತ್ತದೆ. ಪ್ರತಿವಾದಿಯು ವ್ಯವಸಾಯ ವೃತ್ತಿಯನ್ನು ಮಾಡುತ್ತಾರೆ ಎಂದರೆ ಸರಿ. ಸದರಿಯವರಿಗೆ ತೇಜಸ್ವಿನಿ ಮತ್ತು ಹಿತೇಶ್ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದಾಖಲೆಯನ್ನು ನೋಡಿರುತ್ತೇನೆ. ಆ ರೀತಿ ಕರಾರು ಆದಾಗ ಇ-ಸ್ವತ್ತು ಆಗಿತ್ತು. ದಿ: **21.03.2018** ರಂದು ದಾವಾ ಸ್ವತ್ತಿನ ಕ್ರಯ ಪತ್ರದ ನೊಂದಣಿಗೆ ಸಂಬಂಧಿಸಿದಂತೆ ದಾಖಲೆಗಳು ಸಿದ್ದವಿತ್ತು ಎಂದರೆ ಸರಿ. ನಿಪಿ **1** ರಲ್ಲಿ **36** ತಿಂಗಳು ಎಂದು ಯಾವ ಕಾರಣಕ್ಕಾಗಿ ಬರೆಯಲಾಗಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನಾನು ನಿಪಿ **1** ನ್ನು ಓದಿರುತ್ತೇನೆ. **36** ತಿಂಗಳ ಒಳಗಾಗಿ ದಾಖಲೆಗಳನ್ನು ಸಿದ್ದಪಡಿಸಿಕೊಂಡು ಕ್ರಯ ಪತ್ರ ಮಾಡಿಸಬೇಕು ಎಂದು ನಿಪಿ **1** ರಲ್ಲಿ ಇದೆ ಎಂದರೆ ಸರಿ. ಮಾರಾಟದ ಬಗ್ಗೆ ಮಾತುಕತೆ ಆಗಿದ್ದರೆ ಅದೇ ದಿನ ಕ್ರಯ ಪತ್ರ ಮಾಡಿಸಬಹುದಾಗಿತ್ತು, **36** ತಿಂಗಳು ಎಂದು ಸಮಯವನ್ನು ನೀಡುವ ಅಗತ್ಯತೆ ಇರಲಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

**2.** ಮಾಯಣ್ಣರವರ ಮೂಲಕ ಮಾತನಾಡಿ ಸಾಲದ ಮೊತ್ತಕ್ಕೆ ಭದ್ರತೆಗಾಗಿ ನಿಪಿ **1** ನ್ನು ಬರೆದುಕೊಡಲಾಗಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಗೆ ನನ್ನ ಪತಿಯು ನೋಟೀಸ್ ನೀಡಿದ್ದರು ಎಂದರೆ ಸರಿ. ಆ ರೀತಿ ನೋಟೀಸ್‌ನ್ನು ಯಾವ ದಿನಾಂಕದಂದು ಕೊಡಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ದಿ: **03.03.2021** ರಂದು ಆ ರೀತಿ ನೋಟೀಸ್‌ನ್ನು ನೀಡಲಾಗಿದೆ ಎಂದರೆ ಸರಿ. ನನ್ನ ಪತಿಯು ದಿ: **22.07.2022** ರಂದು ಮೃತರಾಗಿರುತ್ತಾರೆ ಎಂದರೆ ಸರಿ. ನೋಟೀಸ್ ನೀಡಿದ **16** ತಿಂಗಳ ನಂತರ ನನ್ನ ಪತಿಯು ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ಪತಿಯು ಮೃತರಾದ ನಂತರ ನಾನು ಪ್ರತಿವಾದಿಗೆ ನೋಟೀಸ್‌ನ್ನು ನೀಡಿರುವುದಿಲ್ಲ. ನನ್ನ ಪತಿಯು ಮೃತರಾದ ಸುಮಾರು **1** ವರ್ಷಕ್ಕೆ ಈ ದಾವೆಯನ್ನು ಸಲ್ಲಿಸಿರುತ್ತೇವೆ. **50** ಸಾವಿರ ರೂಪಾಯಿಯನ್ನು ತಯಾರಾಗಿ ಇಟ್ಟಿರುವ ಬಗ್ಗೆ ದಾಖಲೆ ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಮೌಲ್ಯದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಒಂದು ಚದುರ ಅಡಿಗೆ **1400** ರೂಪಾಯಿ ಬೆಲೆ ಇದೆ ಎಂದರೆ ಇರಬಹುದು. ನನ್ನ ಪತಿಯಿಂದ ಪ್ರತಿವಾದಿಯು

**5,50,000/-** ರೂಪಾಯಿ ಸಾಲ ಪಡೆದುಕೊಂಡಿದ್ದ ಕಾರಣ ನಿಪಿ **1** ರಲ್ಲಿ **36** ತಿಂಗಳು ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ.

**3.** ಪ್ರತಿವಾದಿಗೆ ವ್ಯವಸಾಯದ ಆದಾಯವನ್ನು ಹೊರತುಪಡಿಸಿದ ಬೇರೆ ಆದಾಯದ ಮೂಲ ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಸಂಪೂರ್ಣ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯ ಮಕ್ಕಳಿಗೂ ದಾವಾ ಸ್ವತ್ತಿನಲ್ಲಿ ಹಕ್ಕು ಇದೆ ಎಂದರೆ ಸಾಕ್ಷಿಯು ಮೌನವಾಗಿರುತ್ತಾರೆ. **2018** ರಲ್ಲಿ ದಾವಾ ಸ್ವತ್ತಿನ ಮೌಲ್ಯ **20** ಲಕ್ಷ ರೂಪಾಯಿ ಇದ್ದು, ಸಾಲದ ಉದ್ದೇಶಕ್ಕೆ ನಿಪಿ **1** ನ್ನು ಬರೆದುಕೊಟ್ಟಿದ್ದರೂ ಸಹ ಹೆಚ್ಚು ಬೆಲೆ ಬಾಳುವ ಸ್ವತ್ತನ್ನು ಲಪಟಾಯಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಪ್ರತಿವಾದಿಯು **5,50,000/-** ರೂಪಾಯಿ ಮತ್ತು ಬಡ್ಡಿಯನ್ನು ಕೊಡಲು ತಯಾರು ಇರುತ್ತಾರೆ ಎಂದರೆ ಮಾರಾಟಕ್ಕೆ ಮಾತ್ರ ಹಣವನ್ನು ಕೊಟ್ಟಿದ್ದೆವು. ನನ್ನ ಮಕ್ಕಳು ಚಿಕ್ಕವರಾಗಿದ್ದು, ಅದಕ್ಕೋಸ್ಕರ ಆ ರೀತಿ ಕ್ರಯದ ಕರಾರು ಮಾಡಿರುತ್ತಾರೆ. ಸಾಲದ ಭದ್ರತೆಗೆ ನಿಪಿ **1** ಆಗಿದ್ದರೂ ಸಹ ದಾವಾ ಸ್ವತ್ತನ್ನು ಲಪಟಾಯಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ ಕಾರಣ ನೋಟೀಸ್ ನೀಡಿದ **2** ವರ್ಷಗಳ ನಂತರ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ **1** ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವ ವ್ಯಕ್ತಿಗಳು ನಮಗೆ ಪರಿಚಯಸ್ಥರು ಎಂದರೆ ನನ್ನ ಪತಿಗೆ ಪರಿಚಯಸ್ಥರು ಆಗಿದ್ದರು. ಆದಕಾರಣ ಆಸ್ತಿಯನ್ನು ಲಪಟಾಯಿಸಲು ನಿಪಿ **1** ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಹಣ ಕೊಟ್ಟಾಗ ನನ್ನ ಮಾವ ಮತ್ತು ಮಾಯಣ್ಣ ಹಾಗೂ ನಾನು ಇದ್ದೆವು. ಆ ರೀತಿ ಹಣ ಕೊಟ್ಟಾಗ ನಿಪಿ **1** ರ ಸಾಕ್ಷಿದಾರರು ಇರಲಿಲ್ಲ. ನಾನು **10** ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರತಿವಾದಿಗೆ ಎಷ್ಟು ಮೊತ್ತವನ್ನು ಕೊಡಲಾಗಿದೆ ಎಂದು ನಿಖರವಾಗಿ ನನಗೆ ಗೊತ್ತಿರುವುದಿಲ್ಲ. ನಗದು ರೂಪದಲ್ಲಿ ಹಣವನ್ನು ಕೊಡಲಾಗಿದೆ. ಸಾದ್ಯವಾದರೆ ಹೆಚ್ಚು ಬೆಲೆಬಾಳುವ ಆಸ್ತಿಯನ್ನು ಲಪಟಾಯಿಸಲು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.